**ಮಿಂಚಿನ ಆಟಗಾರ–ಸಚಿನ್ ತೆಂಡುಲ್ಕರ್**

ಸಚಿನ್ ತೆಂಡುಲ್ಕರ್ ಭಾರತ ಹಾಗೂ ವಿಶ್ವ ಕ್ರಿಕೆಟ್ ಕಂಡಿರುವ ಒಬ್ಬ ಅಪ್ರತಿಮ ಆಟಗಾರ.ಆತ ಒಬ್ಬ ಶ್ರೇಷ್ಠ ಬ್ಯಾಟುಗಾರ,ಉತ್ತಮ ಫೀಲ್ಡರ,ಚಾಣಕ್ಷ ಬೌಲರ್ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಒಬ್ಬ ಜವಾಬ್ದಾರಿಯುತ ತಂಡದ ಆಟಗಾರ.೨೧ ವರ್ಷದ ಈ 'ಹಸುಳೆ' ಭಾರತ ಕ್ರಿಕೆಟ್ ತಂಡದ ಅತಿ ಕಿರಿಯ ಆಟಗಾರ ಹಾಗೂ ಅತಿ ಹೆಚ್ಚು ಅನುಭವವುಳ್ಳ ಆಟಗಾರ ಎಂದರೆ ಎಂತಹ ಆಶ್ಚರ್ಯಕರ ಸಂಗತಿಯಲ್ಲವೇ?.೨ ದಿನಗಳ ಹಿಂದೆಯಷ್ಟೇ ಮುಂಬಯಿಯನ್ನು ರಣಜಿ ಚಾಂಪಿಯನಷಿಪ್ ನಲ್ಲಿ ವಿಜಯಿಯಾಗಿ ಮಾಡಿದ ಸಚಿನ್ ತೆಂಡುಲ್ಕರ್,ರಣಜಿ ಇತಿಹಾಸದಲ್ಲೇ ಅತಿ ಕಿರಿಯ ವಿಜಯೀ ಕ್ಯಾಪ್ಟನ್ ಎನಿಸಿಕೊಂಡರು. ಈಗ ಇವರು ತೋರುತ್ತಿರುವ ಫಾರ್ಮ ಗಮನಿಸಿದರೆ, ಸಚಿನ್ ರ ಮುಂದೆ ಪ್ರಪಂಚದ ಯಾವ ಶಕ್ತಿಯೂ ನಿಲ್ಲಲಾರದು ಎನಿಸುತ್ತಿದೆ.

ಭಾರತ ತಂಡವು ಸಚಿನ್ ತೆಂಡುಲ್ಕರ್ ರವರ ಬ್ಯಾಟಿಂಗನ ಮೇಲೆ ಎಷ್ಟರ ಮಟ್ಟಿಗೆ ಅವಲಂಬಿತವಾಗಿದೆಯೆಂದರೆ, ಅವರು ಉತ್ತಮ ಸ್ಕೋರ್ ಮಾಡಿದರಷ್ಟೇ ಭಾರತವು ಗೆಲ್ಲುತ್ತದೆ ಎಂಬ ಪರಿಸ್ಥಿತಿ ಬಂದಿದೆ.ಇತ್ತೀಚೆಗೆ ನಡೆದ ಇಂಡಿಯಾ ನಂಬರ್ ಒನ್ ಚಾಲೆಂಜರ್ ಟ್ರೋಫಿ ಪಂದ್ಯಾವಳಿಯಲ್ಲಿ ಅವರು ೬೮,೮೪,೫೨ ಸ್ಕೋರುಗಳನ್ನು ಮಾಡಿ ಭಾರತ ಹಿರಿಯರ ಕ್ರಿಕೆಟ್ ತಂಡವು ಗೆಲ್ಲುವಂತೆ ಮಾಡಿದರು. ನಂತರ ನಡೆದ ವಿಶ್ವ ೧೧ ವಿರುದ್ದದ ಪಂದ್ಯಗಳಲ್ಲೂ ಒಂದು ಶತಕವನ್ನೊಳಗೊಂಡಂತೆ ಮೂರು ಬಾರಿ ಉತ್ತಮ ರನ್ನುಗಳನ್ನು ಪೇರಿಸಿದರು. ಇವಿಷ್ಟೂ ಸಾಲದೆಂಬಂತೆ ರಣಜಿ ಫೈನಲ್ ಪಂದ್ಯದಲ್ಲಿ ಪಂಜಾಬ ವಿರುದ್ಧ ಎರಡು ಶತಕಗಳನ್ನು ಬಾರಿಸಿದರು. ಮೊದಲ ಇನ್ನಿಂಗ್ಸನಲ್ಲಿ ಇವರು ೧೪೦ ರನ್ನು ಬಾರಿಸಿದರೆ, ಎರಡನೇ ಇನ್ನಿಂಗ್ಸನಲ್ಲಿ ೭ ಸಿಕ್ಸರ್ ಒಳಗೊಂಡಂತೆ ೯೧ ಎಸೆತಗಳಲ್ಲಿ ೧೩೯ ರನ್ನುಗಳನ್ನು ಬಾರಿಸಿದರು. ಇವರ ಈ ಅದ್ಭುತ ಬ್ಯಾಟಿಂಗ್ ಪ್ರದರ್ಶನಗಳು ಪ್ರಪಂಚವನ್ನೇ ಬೆಕ್ಕಸ ಬೆರಗಾಗಿಸಿದೆ.
ಆದರೆ ಈಗ ಭಾರತ ಕ್ರಿಕೆಟ್ ಪ್ರೇಮಿಗಳ ಮನಸ್ಸಿನಲ್ಲಿರುವ ಏಕೈಕ ಪ್ರಶ್ನೆಯೆಂದರೆ,ಸಚಿನ್ ತೆಂಡುಲ್ಕರ್ ರವರು ಈಗ ಆಡುತ್ತಿರುವಂತೆ ಹೊಡೆಬಡಿದಾಟದ ಪ್ರದರ್ಶನ ಮುಂದುವರಿಸಬೇಕೆ? ಅಥವಾ ತಮಗಿರುವ ಅಪಾರ ಬ್ಯಾಟಿಂಗ್ ಕೌಶಲವನ್ನು ಉಪಯೋಗಿಸಿ ಬ್ರಹತ್ ಸ್ಕೋರುಗಳನ್ನು ಮಾಡುತ್ತಾ ತಂಡಕ್ಕೆ ಸೇವೆ ಸಲ್ಲಿಸಬೇಕೇ? ಎಂಬುದು. ೧೯೯೪ ರ ನ್ಯೂಜಿಲೆಂಡ್ ಪ್ರವಾಸದಲ್ಲಿ ಅವರಿಗೆ ಆರಂಭ ಆಟಗಾರನಾಗಿ ಬಡ್ತಿ ನೀಡಿದ ನಂತರ, ಭಾರತದ ಬ್ಯಾಟಿಂಗ್ ಮೊದಲಿನಂತೆ ಇಲ್ಲ. ಒಂದು ದಿನದ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ೧೫ ಓವರ್ ಗಳನ್ನು ಬೌಲ್ ಮಾಡುವವರೆಗೂ ವಿಕೆಟ್ ನ ಸುತ್ತ ೩೦ ಗಜದ ವೃತ್ತದ ಹೊರಗೆ ಕೇವಲ ಇಬ್ಬರು ಫೀಲ್ಡರಗಳು ಮಾತ್ರ ಕ್ಷೇತ್ರ ರಕ್ಷಣೆ ಮಾಡಲು ಅವಕಾಶವಿದೆ. ಈ ನಿಯಮವನ್ನು ಸಚಿನ್ ತೆಂಡುಲ್ಕರ್ ರವರು ಬಹಳ ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾ ಅದರ ಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ. ಮೊದಲು ೧೫ ಓವರಗಳ ಒಳಗೆ, ಬೌಲರನ ತಲೆಯ ಮೇಲೆ ಹಾಗು ಒಳ ವೃತ್ತದ ಒಳಗಿರುವ ಫೀಲ್ಡರಗಳ ತಲೆಯ ಮೇಲೆ ಚೆಂಡನ್ನು ಬಾರಿಸಿ ೪,೬ ರನ್ನುಗಳನ್ನು ಲೀಲಾಜಾಲವಾಗಿ ಸಚಿನ್ ಗಳಿಸುತ್ತಾರೆ.ವಿಶ್ವ ಕ್ರಿಕೆಟ್ ನಲ್ಲಿ ಅತೀ ಹೆಚ್ಚು ಸ್ಟ್ರೈಕ್ ರೇಟ್ ಇರುವ ಆಟಗಾರರಲ್ಲಿ ಸಚಿನ್ ಕೂಡ ಒಬ್ಬರು.

ಇನ್ನಿಂಗ್ಸ್ ಪ್ರಾರಂಭದ ಕೆಲವು ಒವರಗಳಲ್ಲಿ ಉತ್ತಮ ರನ್ನಗಳನ್ನು ಗಳಿಸಿ, ಇವರು ತಮ್ಮ ತಂಡವನ್ನು ಉತ್ತಮ ಸ್ಥಿತಿಗೆ ತಲುಪಿಸುವುದಷ್ಟೇ ಅಲ್ಲ,ಎದುರಾಳಿ ತಂಡದ ಆತ್ಮವಿಶ್ವಾಸವನ್ನು ಕುಗ್ಗಿಸುತ್ತಾರೆ. ಇತ್ತೀಚಿನವರೆಗೂ ಕೆ.ಶ್ರೀಕಾಂತ್ ರವರು ಆಡುತ್ತಿದ್ದ ರೀತಿಯಲ್ಲೇ ಸಚಿನ್ ಕೂಡ ಆಡುತ್ತಿದ್ದರು,ಸಚಿನ್ ತಾಂತ್ರಿಕವಾಗಿ ಹಾಗೂ ಸ್ಟೈಲ್ ನಲ್ಲಿ ಉತ್ತಮ ಬ್ಯಾಟ್ಸಮನ್ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಖ್ಯಾತ

ಕ್ರಿಕೆಟ್ ತಾರೆ ಹಾಗೂ ಮಾಜಿ ಕ್ಯಾಪ್ಟನ್ ಸುನಿಲ್ ಗವಾಸ್ಕರರ ಅನಿಸಿಕೆಯಂತೆ ಸಚಿನರವರ ಈ ರಭಸದ ಬ್ಯಾಟಿಂಗ್ ಪ್ರದರ್ಶನ ತಂಡಕ್ಕೆ ಒಳ್ಳೆಯದಲ್ಲ ಎನ್ನುತ್ತಾರೆ.ಏಕೆಂದರೆ ಪ್ರಾರಂಭಿಕ ಬ್ಯಾಟ್ಸಮನನ್ನೊಬ್ಬ ಉತ್ತಮವಾಗಿ ಆಡುತ್ತಿದ್ದು,ಯಾವುದೋ ಒಂದು ಆಲಸಿ ಹೊಡೆತಕ್ಕೆ ಔಟಾದರೆ ಅದು ತಂಡಕ್ಕೆ ಆ ಬ್ಯಾಟ್ಸಮನ್ ಮಾಡುವ ದ್ರೋಹ ಎಂದು ಗವಾಸ್ಕರ ಅಭಿಪ್ರಾಯ ಪಡುತ್ತಾರೆ. ಸಚಿನರವರು ೫೦–೬೦ ಸ್ಕೋರ ಗಳಿಸಿದ ಮೇಲೆ ತಮ್ಮ ಬ್ಯಾಟಿಂಗ್ ಗತಿಯನ್ನು ನಿಧಾನಿಸಿ ಶತಕ ಬಾರಿಸುವತ್ತ ಕಣ್ಣಿಡಬೇಕೆಂದು ಅವರು ಹೇಳಿದ್ದಾರೆ.ಆದರೆ      ಇನ್ನೊಬ್ಬ ಮಾಜಿ ಆಟಗಾರ ರವಿ ಶಾಸ್ತ್ರಿಯವರ ಪ್ರಕಾರ,ಸಚಿನ್ ಈ ರೀತಿಯಲ್ಲೇ ಮುಂದುವರೆಸುವುದು ಒಳ್ಳೆಯದು ಎನ್ನುತ್ತಾರೆ.ಸಚಿನ್ ರವರ್ ಯಶಸ್ಸು. ಬೌಲರುಗಳಿಗೆ ಯಾವುದೇ ಅವಕಾಶವನ್ನು ಕೊಡದಿರುವುದರಲ್ಲಿ ಅಡಗಿದೆ. ಆದ್ದರಿಂದ ಅವರು ಇನ್ನಿಂಗ್ಸನ ಮೊದಲ ಕೆಲ ಓವರಗಳಲ್ಲಿ ಹೀಗೇ ಮಿಂಚಿನ ಆಟ ಮುಂದುವರೆಸಬೇಕು ಎಂದು ಶಾಸ್ತ್ರಿ ಹೇಳುತ್ತಾರೆ.

ಭಾರತದ ಈ ಇಬ್ಬರು ಮಾಜಿ ಆಟಗಾರರು ಏನೇ ಹೇಳಿದರೂ, ಸಚಿನ್ ರವರ ಬ್ಯಾಟಿಂಗಂತೂ ಒಂದು ದಿನದ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಗೆ ಹೇಳಿ  ಮಾಡಿಸಿದಂತಿದೆ.ನ್ಯೂಜಿಲೆಂಡನಲ್ಲಿ ಇತ್ತೀಚಿಗೆ ಇವರು ನೀಡಿದ ಪ್ರದರ್ಶನದಿಂದ ಪ್ರಭಾವಿತರಾದ ಆಸ್ಟ್ರೇಲಿಯಾದ ಶ್ರೇಷ್ಠ ಬೌಲರ್ ಶೇನ ವಾರ್ನರವರು,ಸಚಿನ್ ರವರನ್ನು ವಿಶ್ವದ ಶ್ರೇಷ್ಠ ಬ್ಯಾಟ್ಸಮನ್ ಎಂದು ಕರೆದಿದ್ದಾರೆ.ಇದು ನಿಜಕ್ಕೂ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಲ್ಲವೇ? ಇಷ್ಟೆಲ್ಲ ಸಾಧನೆ ಮಾಡಿರುವ ಸಚಿನರಿಗೆ ಇನ್ನೂ ೨೧ ವರ್ಷ ಮಾತ್ರ ಎಂದರೆ ನಮಗೆ ಆಶ್ಚರ್ಯವಾಗುತ್ತದೆ.ಅವರು ಮುಂದೆ ಇನ್ನೂ ಅನೇಕ ದಾಖಲೆಗಳನ್ನು ಸ್ಥಾಪಿಸಿ ಭಾರತಕ್ಕೆ ಇನ್ನೂ ಹೆಚ್ಚಿನ ಕೀರ್ತಿ ತರಲಿ ಎಂದು ಹಾರೈಸೋಣ.

Nov 20th 1994     Hosa Diganta     Minchina Atagaar-Sachin Tendulkar.